# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

78

ದೂರವಾಣಿ: 08221-224311

08221-225551

ರವರ ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಆರ್.ಪಿ.ರಸ್ತೆ,
ನಂಜನಗೂಡು-571301.


ಸಂಖ್ಯೆ: ಸಕಾನಿಇಂ (ವಿ)/ಸಇಂ (ತಾ)/2019-20/2297 - 99 ದಿನಾಂಕ:25-11-19

## ಜನ ಸಂಪರ್ಕ ಸಭಾ ನಡಾವಳಿ

ದಿನಾಂಕ:13.11.2019 ರಂದು ನಂಜನಗೂಡು ಉಪವಿಭಾಗ-1ರ ಕಛೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆಯ ಸಭಾ ನಡಾವಳಿ

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

| | |
|---|---|
| 1. ಶ್ರೀ ಹೆಚ್.ಕೆ ರಮೇಶ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ವಿಭಾಗ |
| 2. ಶ್ರೀ ಆನಂದ.ಸಿ.ಎಸ್ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) |
| 3. ಶ್ರೀ ಹರೀಶ್ ಕುಮಾರ್ | ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ |
| 4. ಶ್ರೀ ವೀರೇಶ್.ಕೆ.ವಿ | ಸಹಾಯಕ ಇಂಜಿನಿಯರ್ ತಾಂಡವಪುರ ಶಾಖೆ |
| 5. ಶ್ರೀ ಶಶಿಕಿರಣ್ | ಸಹಾಯಕ ಇಂಜಿನಿಯರ್ ಸಿಂದುವಳ್ಳಿಪುರ ಶಾಖೆ |
| 6. ಶ್ರೀ ರಂಗಸ್ವಾಮಿ | ಕಿರಿಯ ಇಂಜಿನಿಯರ್ ಹದಿನಾರು ಶಾಖೆ |
| 7. ಕುಮಾರಿ ಡಯಾನ ಪೆರೇರ | ಕಿರಿಯ ಇಂಜಿನಿಯರ್ ಹದಿನಾರು ಶಾಖೆ |

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ನಂಜನಗೂಡು ಉಪವಿಭಾಗ-1 ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಗ್ರಾಹಕರು, ಹಾಗೂ ಪತ್ರಿಕಾ ಪ್ರತಿನಿಧಿಗಳನ್ನು ಸ್ವಾಗತಿಸಿದರು. ನಂತರ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ರವರು ಹಿಂದಿನ ಸಭೆಯಲ್ಲಿ ಸಲ್ಲಿಸಿದ್ದ ದೂರುಗಳಿಗೆ ಕೈಗೊಂಡ ಕ್ರಮಗಳ ಕುರಿತು ಅನುಪಾಲನ ವರದಿಯನ್ನು ಓದಿದರು. ನಂತರ ಗ್ರಾಹಕರು ಹೊಸದಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು.
ಅಹವಾಲುಗಳ ವಿವರ ಈ ಕೆಳಕಂಡಂತಿದೆ.

Scanned by CamScanner

| ಕ್ರಮ ಸಂಖ್ಯೆ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ | ಅಹವಾಲುಗಳ ವಿವರ | ಕ್ರಮ |
|---|---|---|---|
| 1 | ಶ್ರೀ ಗುರುಪಾದಸ್ವಾವಿ<br>ಹನಿಯಂಬಳ್ಳಿ ಗ್ರಾಮ<br>8971220198 | ಹನಿಯಂಬಳ್ಳಿ ಗ್ರಾಮದಲ್ಲಿ ಲಾಂಗ್ ಸರ್ವೀಸ್ ಮೇನ್ ಇರುವ ಮನೆಗಳಿಗೆ ಅನುವಾಗುವಂತೆ 04 ಸಂಖ್ಯೆಯ ಕಂಬ ಅಳವಡಿಸಿ LT ಮಾರ್ಗ ವಿಸ್ತರಿಸಿಕೊಡಬೇಕೆಂದು ಕೋರಿದರು. | ಸುತ್ತೂರು ಶಾಖಾಧಿಕಾರಿಯವರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 2 | ಶ್ರೀ ಮಹದೇವಪ್ಪ,<br>ಗೋವಿಂದರಾಜ ಲೇಔಟ್.<br>ನಂಜನಗೂಡು | ಬೀದಿ ದೀಪ ಸ್ಥಾವರಗಳ Control Wire ಅಳವಡಿಸಿ ಕೊಡಲು ಕೋರಿದರು | ನಂಜನಗೂಡು ಪಟ್ಟಣ ಶಾಖಾಧಿಕಾರಿಯವರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 3 | ಶ್ರೀ ಮಂಜುಪ್ರಸಾದ್,<br>ಮಹದೇಶ್ವರ ಲೇಔಟ್<br>9900204958 | Voltage ಏರಿಳಿತವಿದ್ದು ಸರಿಪಡಿಸಿ ಕೊಡುವಂತೆ ಕೋರಿದರು. | ನಂಜನಗೂಡು ಪಟ್ಟಣ ಶಾಖಾಧಿಕಾರಿಯವರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 4 | ಶ್ರೀ ದೊರೆಸ್ವಾಮಿ,<br>ಕೌನ್ಸಿಲರ್<br>ನಂಜನಗೂಡು | 1. ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸಲು Prepaid Meter ಅಳವಡಿಸುತ್ತಿರುವ ಬಗ್ಗೆ ಮಾಹಿತಿ ಕೋರಿದರು.<br>2. ಹಾನಿಗೊಳಗಾದ ಮತ್ತು ಕಬ್ಬಿಣದ ವಿದ್ಯುತ್ ಕಂಬಗಳಿದ್ದು ಬದಲಾಯಿಸಿಕೊಡುವಂತೆ ಕೋರಿದರು | ಪಟ್ಟಣ ಶಾಖಾಧಿಕಾರಿಯವರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 5 | ಶ್ರೀಮತಿ ಸುಮ<br>ಬಸವನಗುಡಿ ಬ್ಲಾಕ್<br>9740295891 | ಗಾಳಿ ಬೀಸಿದಾಗ ಮನೆಯ ಹತ್ತಿರವಿರುವ ವಿದ್ಯುತ್ ಕಂಬದಲ್ಲಿ spark ಬರುತ್ತಿದ್ದು ಗರಿಗಳನ್ನು ತೆರವುಗೊಳಿಸಲು ಕೋರಿದರು. | ಪಟ್ಟಣ ಶಾಖಾಧಿಕಾರಿಯವರಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು |
| 6 | ಶ್ರೀ ಬಸವಣ್ಣ, ಮೂಳ್ಳೂರು | ಬಸವೇಶ್ವರನಗರ ಗ್ರಾಮದಲ್ಲಿ ಹೊಸದಾಗಿ ನಿರ್ಮಾಣವಾದ ಮನೆ ಮೇಲೆ 11ಕೆವಿ ವಿದ್ಯುತ್ ಮಾರ್ಗ ಹಾದುಹೋಗಿದ್ದು ಸ್ಥಳಾಂತರಿಸಿಕೊಡಬೇಕೆಂದು ಕೋರಿದರು. | ಸುತ್ತೂರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು |
| 7 | ಶ್ರೀ ಮಹದೇವಸ್ವಾಮಿ<br>ಹನಿಯಂಬಳ್ಳಿ<br>996470686 | ಗ್ರಾಮದಲ್ಲಿರುವ ಕಬ್ಬಿಣದ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಕೋರಿದರು. | ಸುತ್ತೂರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು |
| 8 | ಶ್ರೀ ಬಸವರಾಜು.ಬಿ<br>ಹೆಜ್ಜಿಗೆ ಗ್ರಾಮ<br>(9483085965) | ತೊರೆಮಾವು ಗ್ರಾಮದಲ್ಲಿ ಮುಖ್ಯ ರಸ್ತೆಯಲ್ಲಿ ಹಾದುಹೋಗುವ ವಿದ್ಯುತ್ ವಾಹಕದ ಎತ್ತರವನ್ನು ಹೆಚ್ಚಿಸುವಂತೆ ಕೋರಿದರು | ತಾಂಡವಪುರ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು |

Scanned by CamScanner

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ನಂಜನಗೂಡು ರವರು ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ ಸಭೆಯಲ್ಲಿ ಗ್ರಾಹಕರು ಮಂಡಿಸಿರುವ ದೂರುಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ತುರ್ತಾಗಿ ಅಗತ್ಯ ಕ್ರಮ ಕೈಗೊಳುವುದಾಗಿ ತಿಳಿಸಿದರು ಹಾಗೂ ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಶಾಖಾಧಿಕಾರಿಗಳಿಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ–1
ಚಾ.ವಿ.ಸ.ನಿ.ನಿ, ನಂಜನಗೂಡು.

ಪ್ರತಿಯನ್ನು:

1) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನ ವೃತ್ತ, ಕುವೆಂಪುನಗರ ಮೈಸೂರು ರವರ ಅವಗಾಹನೆಗಾಗಿ
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ನಂಜನಗೂಡು ರವರ ಅವಗಾಹನೆಗಾಗಿ
3) ಸಂಬಂದ ಪಟ್ಟ ಶಾಖಾಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಮು.ಕಡತ

Scanned by CamScanner